ಶ್ರೀ ಜಿ. ರಾಮೇಗೌಡ.—ಯಾವುದಾದರೂ ಸೊಸೈಟಿಗಳು ಆ ರೀತಿಯಾಗಿ ಮುಂದೆ ಬಂದರೆ ಖಂಡಿತ ವಾಗಿ ಅವರಿಗೆ ಈ ಕೆಲಸವನ್ನು ಪಹಿಸುವುದಕ್ಕೆ ಸರ್ಕಾರ ಸಿದ್ಧ ಇದೆ. ಹಿಂದಿನ ಬಂದು ಪದ್ಧತಿಯಂತೆ ಡಿಪ್ಲೋಗಳ ಮೂಲಕ ಈ ಬಿದಿರನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕೆ.ಎಂ. ತಮ್ಮಯ್ಯ.—ಸ್ವಾಮಿ, ಈ ಪ್ರಶ್ನೆಯ (ಅ) ಗೆ ಉತ್ತರವಾಗಿ ಬಿದುರಿನ ಬೆಳೆ ಸತ್ತು ಹೋದದ್ದರಿಂದ, ಬಿದಿರು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಾಗದೆ ಬಿದಿರಿನ ಕೊರತೆ ಉಂಟಾಗಿದೆ ಎಂದು ಹೇಳಿದ್ದೀರಿ. ಬಿದಿರು ಸಾಮಾನ್ಯವಾಗಿ ಸಾಯುವುದಿಲ್ಲ. ಅದು ಸಾಯುವಾಗ ನೂರಾರು ಕವಲು ಒಡೆಯುತ್ತದೆ. ಅದನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳದೇ ಕಡಿದಿರುವುದರಿಂದ ಅದು ಸತ್ತಿದೆ ಅನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ? ಮತ್ತು ಈ ಬಿದಿರು ಸಾಯುವುದನ್ನು ತಪ್ಪಿಸುವುದಕ್ಕೆ ಏನಾದರೂ ಒಂದು ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಜಿ. ರಾಮೇಗೌಡ.—ವಯಸ್ಸಾದ ಮೇಲೆ ಅದು ಸಾಯುವಂಥಾ ಪ್ರಕರಣಗಳು ಇವೆ. ಆ ಮರವನ್ನು ಕಡಿದು ಹಾಕಿರುವುದರಿಂದ ಸತ್ತಿಲ್ಲ. ಸಾಮಾನ್ಯವಾಗಿ ೩೦ ವರ್ಷ ಆದಮೇಲೆ ಆ ಬೊಂಬು ಗಳನ್ನು ಸಾಯಿಸುವುದು ಕಷ್ಟ. ವಯಸ್ಸಾದ ಮೇಲೆ ಅದು ಹೂವು ಬಂದಾಗ ಒಣಗಿ ಹೋಗುತ್ತವೆ.

ಶ್ರೀ ಜೆ.ಬಿ. ಶಂಕರರಾವ್.—ದಾಂಡೇಲಿಯಲ್ಲಿ ಇಡೀ ಅರಣ್ಯ ಪ್ರದೇಶವನ್ನು ನಿಮ್ಮ ಒಂದು ಒಪ್ಪಂದದ ಪ್ರಕಾರ ಅವರಿಗೆ ಗುತ್ತಿಗೆಗೆ ಕೊಟ್ಟಿದ್ದೀರಿ. ಈ ಮೇದಾರುಗಳಿಗೆ ೫೦ ಭಾಗದಷ್ಟು ಕೊಡ ಬೇಕು ಅಂತ ಇದೆ. ಹೀಗೆ ಎಲ್ಲಾ ಬೊಂಬುಗಳು ವಯಸ್ಸಾದ ಮೇಲೆ ಸಾಯುತ್ತಾ ಹೋದರೆ ಆ ಫ್ಯಾಕ್ಟರಿಯವರಿಗೆ ಬೊಂಬುಗಳು ಕೊಡುವುದು ಬಹಳ ಕಡಿಮೆಯಾಗುತ್ತದೆ. ಇವರುಗಳಿಗೂ ಕೊಡುವು ದಕ್ಕಾಗುವುದಿಲ್ಲ. ಇದಕ್ಕೆ ತಾವು ಏನು ಒಂದು ವ್ಯವಸ್ಥೆ ಮಾಡಿದ್ದೀರಿ?

ಶ್ರೀ ಜಿ. ರಾಮೇಗೌಡ.—ಅವರಿಗೆ ಬೊಂಬು ಕೊಡಬೇಕಾದರೆ ಸಬ್ಸ್ಕ್ರಿಪ್ಷನ್ ಅವೈಲಬಿಲಿಟಿ ಅಂತ ಒಂದು ಕಂಡೀಷನ್ಸ್ ಹಾಕಿದ್ದೇವೆ. ಅವರಿಗೆ ಇರಲಿ ಇಲ್ಲದೇ ಇರಲಿ ಒಂದು ವರ್ಷಕ್ಕೆ ೨೦ ಸಾವಿರ ಟನ್ ಅಷ್ಟು ಬಿದಿರನ್ನು ಮೇದಾರ್‌ಗಳಿಗೆ ತಂದುಕೊಡಬೇಕು ಅಂತ ಇದೆ. ಆ ಪ್ರಕಾರ ಅವರಿಗೆ ಹೋಗುತ್ತಾ ಇದೆ.

Bore-wells in Kumsi and Haranahalli Area Shimoga Taluk

511. Sri Sheernaly Chandrashekar (Hosanagar).—Will the Chief Minister be pleased to state:—

(*a*) whether there is any proposal before Government to dig about thirty bore-wells each in Kumsi and Haranahally area of Shimoga Taluk and lift the water to irrigate Kumsi and Haranahally area in Shimoga Taluk;

(*b*) if so, whether the Public Works Department has submitted plans and estimate and obtained administrative sanction ;

(*c*) whether the Government intend to take up that work immediately ?

Sri D. Devaraj Urs (Chief Minister).—

(*a*) Yes. The proposal is under investigation.

(*b*) No.

(*c*) Does not arise in view of reply at (*b*).

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸ್ವಾಮಿ, (ಆ) ಪ್ರಶ್ನೆಯ ಉತ್ತರವಾಗಿ ಹೌದು, ಸಲಹೆಯು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಸ್ವಾಮಿ ಈ ಭಾಗದ ಪ್ರದೇಶ ರೈನ್ ಷ್ಯಾಡೋ ಬೆಲ್ಟ್ ಏರಿಯಾ. ಈ ಪ್ರದೇಶದಲ್ಲಿ ಈ ವರ್ಷ ಮಳೆ ಇಲ್ಲ. ಈ ಪ್ರದೇಶದ ಜನರು ಈ ಒಂದು ಪರಿಸಿ ತಿಯಲ್ಲಿರುವುದರಿಂದ ಅವರು ಒಂದು ತುರ್ತುಪರಿಸ್ಥಿತಿಯನ್ನು ಗಮನಿಸಿ ಈ ಕೆಲಸವನ್ನು ಆದಷ್ಟು ಬೇಗ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಅವರ ಒಂದು ಫೀಸಬಿಲಿಟಿ ಸ್ಟಡಿ ಮಾಡದೇ ಈ ಕೆಲಸವನ್ನು ಸುಮ್ಮನೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. We are anxious to see that some help is given to that area. That is why the Government has taken up that work. ಶಿವಮೊಗ್ಗಾ ಡಿವಿಷನ್‌ನಲ್ಲಿ ಎಕ್ಸಿಕ್ಯೂಟೀವ್ ಇಂಜಿನೀಯರ್ ಇದರ ಎಸ್ಟಿಮೇಟ್, ಪ್ಲಾನ್ ಮತ್ತು ಅದರ ಒಂದು ಫೀಸಬಿಲಿಟಿ ನೋಡುತ್ತಾ ಇದ್ದಾರೆ. I will ask him to expedite.

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್.—ಸ್ವಾಮಿ ನಾನು ಮೊನ್ನೆ ತಾನೇ ಚೀಫ್ ಇಂಜನೀಯರ್ ಕೂಡ ಮಾತನಾಡಿದೆ. ಅವರು ಪ್ಲಾನ್ ಎಸ್ಟೀಮೇಟ್ ಇವೆಲ್ಲಾ ರೆಡಿ ಮಾಡಿಬಿಟ್ಟಿದ್ದೇವೆ. ಅವರು ಮಂಜೂರಾತಿ ಕೊಟ್ಟರೆ ನಾವು ಕೆಲಸ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು.

ಶ್ರೀ ಡಿ. ದೇವರಾಜ ಅರಸ್.—ಇಂಜನೀಯರ್ ಹಾಗೇನೂ ಹೇಳಿಲ್ಲಾ. ಅವರು ತಯಾರು ಮಾಡಿದ್ದರೆ ಕಳುಹಿಸಲಿ. Let him send it on to the Government, and we will see.

ಶ್ರೀ ಜಿ. ಬಸವಣ್ಣಪ್ಪ,—ಬೆಲ್ಟ್ ಏರಿಯಾದ ನಾನಾ ಭಾಗದಲ್ಲಿ ಈ ರೀತಿಯಾದ ತೊಂದರೆಗಳು ಇವೆ. ಈ ಬಗ್ಗೆ ಒಂದು ಸರ್ವೆ ಮಾಡಿ ಯಾವ ಯಾವ ತಾಲ್ಲೂಕಿನಲ್ಲಿ ಈ ಪರಿಸ್ಥಿತಿ ಇದೆ ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಯಾವ ಯಾವ ತಾಲ್ಲೂಕಿನಲ್ಲಿ ಯಾವ ಯಾವ ಬಾವಿಗಳನ್ನು ರಿಪೇರಿ ಮಾಡಿಸಬೇಕು ಅನ್ನುವ ಬಗ್ಗೆ ರಿಪೋರ್ಟ್ ಬಂದಿದೆ. ಬೇಕಾದರೆ ಮತ್ತೊಂದು ಸಾರಿ ಅದನ್ನು ಕೇಳಿದರೆ ಕೊಡಿಸಿಕೊಡುತ್ತೇನೆ.

Electricity to Industries, Agriculture and Cottage Industries

555. SRI K.S. KALAMARIGOWDA (Periyapatna). -Will the Minister of State for Information and Youth Services be pleased to state:—

(*a*) what is the quantity of electrical energy generated in Karnataka State ? Out of which how much is being supplied to Industries and how mnch is being supplied to agriculture ;

(*b*) how much is for Cottage Industries ? How much is supplied for domestic use in urban and rural areas ;

(*c*) what is the quantum of energy supplied to Industries run in rural areas ; Out of the above how many Industries are agricultural oriented ;

SRI K.H. SRINIVAS (Minister of State for Infomation and Youth Services).—

(*a*) The total units generated and imported amounted to 5430 million in 1977-78. After transmission losses, 4548 Million Units were supplied to consumers. Units supplied to Industries and Agriculture are 3107 million and 358 million respectively.